■ ವಿಶಾಖ ಎನ್.

# ‘ಜವಾನ್’ ಅಲೆ ಮೇಲೆ ‘ಡಂಕಿ’ ಪ್ರಚಾರ




ಶಾರುಖ್ ಖಾನ್ ಈ ವರ್ಷವನ್ನು ತಮ್ಮ ಮಾರ್ಕೆಟಿಂಗ್ ವರ್ಷವಾಗಿ ಮಾರ್ಪಡಿಸಿಕೊಂಡಿದ್ದಾರೆ. ಐವತ್ತೇಳನೇ ವಯಸ್ಸಿನ ಈ ನಟ ‘ಕಿಂಗ್ ಖಾನ್’ ಎಂದು ತಮಗೆ ಸಂದಿರುವ ಬಿರುದಾವಳಿಯನ್ನು ಉಜ್ಜುತ್ತಿರುವುದಷ್ಟೇ ಅಲ್ಲದೆ, ದಕ್ಷಿಣ ಭಾರತದ ಕಡೆಗೆ ವಾಲಿದ್ದ ಬಾಕ್ಸ್ ಆಫೀಸ್ ಯಶಸ್ಸಿನ ಮುಳ್ಳು ಉತ್ತರ ಭಾರತದ ಕಡೆಗೂ ಆಗೀಗ ಮರಳುವಂತೆ ಮಾಡತೊಡಗಿದ್ದಾರೆ.

ಈ ವರ್ಷದ ಪ್ರಾರಂಭದಲ್ಲಿ ಶಾರುಖ್ ಅಭಿನಯದ ‘ಪಠಾಣ್’ ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ದೊಡ್ಡ ಯಶಸ್ಸು ಕಂಡಿತ್ತು. ಈಗ ‘ಜವಾನ್’ ಜಯಭೇರಿ. ಈ ಅಲೆಯು ತಗ್ಗುವ ಮೊದಲೇ ವರ್ಷಾಂತ್ಯದ ಹೊತ್ತಿಗೆ ಅಥವಾ ಮುಂದಿನ ವರ್ಷದ ಮೊದಲ ಭಾಗದಲ್ಲಿ ಅವರದ್ದೇ ಇನ್ನೊಂದು ಸಿನಿಮಾ ತೆರೆಕಾಣಲಿರುವುದು ನಿಕ್ಕಿಯಾಗಿದೆ. ‘ಜವಾನ್’ನ ಯಶಸ್ಸಿನ ಮಂತ್ರ ಚಾಲ್ತಿಯಲ್ಲಿ ಇರುವಾಗಲೇ ‘ಡಂಕಿ’ ಚಿತ್ರದ ಪ್ರಚಾರವನ್ನು ಅವರು ಸೂಕ್ಷ್ಮ ತಂತ್ರಗಾರಿಕೆಯಿಂದ ಅದಾಗಲೇ ಪ್ರಾರಂಭಿಸಿದ್ದಾರೆ.

“ಹೊಸ ವರ್ಷ ಹಾಗೂ ಕ್ರಿಸ್‌ಮಸ್ ಇನ್ನೇನು ಬರಲಿವೆ. ನಾವು ‘ಡಂಕಿ’ಯನ್ನು ಆ ಸಂದರ್ಭದಲ್ಲಿ ರಿಲೀಸ್ ಮಾಡುತ್ತೇವೆ. ನಾನು ರಾಷ್ಟ್ರೀಯ ಏಕತೆಯನ್ನು ಪಾಲಿಸುತ್ತಾ ಬಂದಿರುವೆ. ಏನೇ ಆಗಲಿ, ನನ್ನ ಸಿನಿಮಾ ಬಿಡುಗಡೆಯಾದರೆ ಅದೇ ಈದ್. ನಾನು ಕಷ್ಟಪಟ್ಟು ಕೆಲಸ ಮಾಡುತ್ತಿರುವೆ. ಕಳೆದ 29 ವರ್ಷಗಳಿಗಿಂತ ಹೆಚ್ಚು ಕಷ್ಟಪಟ್ಟು ಈಗ ದುಡಿಯುತ್ತಿರುವೆ. ಇನ್ನೂ ಕಷ್ಟಪಡಲು ಸಿದ್ಧ. ಯಾಕೆಂದರೆ, ಜನರಿಗೆ ನನ್ನ ಸಿನಿಮಾ ಇಷ್ಟವಾದ ಖುಷಿಯಲ್ಲಿ ಹುಟ್ಟುವ ಉತ್ಸಾಹಕ್ಕೆ ಎಣೆಯಿಲ್ಲ” ಎಂದು ಶಾರುಖ್ ಖಾನ್ ಹೇಳಿದ್ದಾರೆ.

ಬೇರೆ ದೇಶಕ್ಕೆ ವಲಸೆ ಹೋದವರು ಅಧಿಕೃತ ವೀಸಾ ಇಲ್ಲದೆ ತಮ್ಮ ದೇಶಕ್ಕೆ ಅಡ್ಡಮಾರ್ಗದ ಮೂಲಕ ಮರಳುವುದನ್ನು ‘ಡಂಕಿ’ ಎಂದು ಕರೆಯುತ್ತಾರೆ. ಶಾರುಖ್ ಖಾನ್ ಇಂತಹ ಭಿನ್ನ ಪಯಣವಿರುವ ಕಥಾಚಿತ್ರದಲ್ಲಿ ನಾಯಕನಾಗಿ ಅಭಿನಯಿಸಿದ್ದಾರೆ. ಅವರ ಜೊತೆಗೆ ತಾಪ್ಸಿ ಪನ್ನು, ವಿಕ್ಕಿ ಕೌಶಲ್, ಧರ್ಮೇಂದ್ರ ಕೂಡ ನಟಿಸಿದ್ದಾರೆ. ರಾಜ್‌ಕುಮಾರ್ ಹಿರಾನಿ ಸಿನಿಮಾ ಅಂದಮೇಲೆ ಹೊಸತೇನನ್ನಾದರೂ ಕೊಟ್ಟೇ ಕೊಡುತ್ತಾರೆ ಎನ್ನುವ ವಿಶ್ವಾಸ ಅಭಿಮಾನಿಗಳದ್ದು.

‘ಜವಾನ್’ ಸಿನಿಮಾ ನಿರ್ದೇಶಕ ಅಟ್ಲಿ ಕೂಡ ‘ಡಂಕಿ’ ಚಿತ್ರದ ಯಶಸ್ಸಿನ ಭವಿಷ್ಯವಾಣಿ ನುಡಿಯಲಾರಂಭಿಸಿದ್ದಾರೆ. ‘ಪಠಾಣ್’, ‘ಜವಾನ್’ ಎರಡೂ ಸಿನಿಮಾಗಳಿಗಿಂತ ಇದು ಹೆಚ್ಚು ಹಣ ಗಳಿಸಲಿದೆ ಎನ್ನುವುದು ಅವರ ಭವಿಷ್ಯವಾಣಿಯ ಸಾರ. ■

# ಸೇತುಪತಿ-ಕತ್ರಿನಾ ಜೋಡಿ ಮಾಡಬಹುದೆ ಮೋಡಿ?



ಕತ್ರಿನಾ ಕೈಫ್, ವಿಜಯ್ ಸೇತುಪತಿ (ಕತ್ರಿನಾ ಇನ್‌ಸ್ಟಾಗ್ರಾಂ ಚಿತ್ರ)

ವಿಜಯ್ ಸೇತುಪತಿ, ಕತ್ರಿನಾ ಕೈಫ್, ರಾಧಿಕಾ ಶರತ್‌ಕುಮಾರ್, ಸಂಜಯ್ ಕಪೂರ್, ಟಿನೂ ಆನಂದ್, ಷಣ್ಮುಗರಾಜನ್ ಇವರನ್ನೆಲ್ಲ ಒಂದೇ ಸಿನಿಮಾದಲ್ಲಿ ನಟಿಸುವಂತೆ ಮಾಡಿದವರು ನಿರ್ದೇಶಕ ಶ್ರೀರಾಮ್ ರಾಘವನ್. 2021ರಲ್ಲೇ ಚಿತ್ರೀಕರಣ ಪ್ರಾರಂಭಿಸಿದ್ದ ಆ ಸಿನಿಮಾದ ಹೆಸರು ‘ಮೆರ್ರಿ ಕ್ರಿಸ್‌ಮಸ್’. ಈ ವರ್ಷ ಕ್ರಿಸ್‌ಮಸ್ ಹೊತ್ತಿಗೆ ಈ ಚಿತ್ರ ತೆರೆಕಾಣುವ ಸಾಧ್ಯತೆ ಇದೆ. ‘ಅಂಧಾಧುನ್’ ಚಿತ್ರದ ಮೂಲಕ ಗೆಲುವು ಕಂಡಿದ್ದ ಶ್ರೀರಾಮ್ ರಾಘವನ್ ಥ್ರಿಲ್ಲರ್ ಕಥಾನಕಗಳ ಮೂಲಕ ಮನಸ್ಸಿಗೆ ಗಾಳ ಹಾಕುವುದರಲ್ಲಿ ನಿಸ್ಸೀಮರು. ಈ ಸಿನಿಮಾ ಕೂಡ ಅದೇ ಪ್ರಭೇದಕ್ಕೆ ಸೇರಿದೆ.

ಇದುವರೆಗೆ ಹಿಂದಿ ಭಾಷೆಯಲ್ಲಷ್ಟೇ ಸಿನಿಮಾಗಳನ್ನು ನಿರ್ದೇಶಿಸುತ್ತಾ ಬಂದವರು ಅವರು. ಈಗ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳಲು ಏಕಕಾಲದಲ್ಲಿ ಹಿಂದಿ, ತಮಿಳು ಎರಡೂ ಭಾಷೆಗಳಲ್ಲಿ ‘ಮೆರ್ರಿ ಕ್ರಿಸ್‌ಮಸ್’ ಚಿತ್ರೀಕರಿಸಿದ್ದಾರೆ. ಹಾಗಾಗಿಯೇ ತಾರಾಗಣವನ್ನು ಈ ರೀತಿಯಲ್ಲಿ ಆಯ್ಕೆ ಮಾಡಿರುವುದು. ‘ಜವಾನ್’ ಸಿನಿಮಾ ಪ್ರಚಾರ ಸಮಾರಂಭವೊಂದರಲ್ಲಿ ವಿಜಯ್ ಸೇತುಪತಿ ತಮಗೆ ಯಾವ ನಟಿ ಇಷ್ಟ ಎಂಬ ಪ್ರಶ್ನೆಯೊಂದಕ್ಕೆ ಉತ್ತರ ನೀಡಿದ್ದರು. ‘ನನಗೆ ಎಲ್ಲ ನಾಯಕಿಯರೂ ಇಷ್ಟ. ಈಗ ಕತ್ರಿನಾ ಜೊತೆಗೆ ಅಭಿನಯಿಸಿರುವೆ. ಶ್ರೀರಾಮ್ ರಾಘವನ್ ಒಳ್ಳೆಯ ನಿರ್ದೇಶಕ. ಅವರೊಟ್ಟಿಗೆ ಕೆಲಸ ಮಾಡಿದ ಖುಷಿ ಇದೆ. ಹಿಂದಿ ಚಿತ್ರರಂಗಕ್ಕೆ ಹೊಸಬನಾಗಿಯೇನೂ ಉಳಿದಿಲ್ಲ’ ಎಂದಿದ್ದರು. ಪ್ರೀತಂ ಸಂಗೀತ ನಿರ್ದೇಶನವಿರುವ ‘ಮೆರ್ರಿ ಕ್ರಿಸ್‌ಮಸ್’ ಸಿನಿಮಾ ವಿಭಿನ್ನವಂತೂ ಹೌದು ಎಂದು ಖುದ್ದು ವಿಜಯ್ ಸೇತುಪತಿ ಹೇಳಿರುವುದರಿಂದ ನಿರೀಕ್ಷೆ ಗರಿಗೆದರಿದೆ. ■